ಶ್ರೀ ರಾಮಚಂದ್ರ ವೀರಪ್ಪನವರು ಇಂದು ನಮ್ಮ ಜೊತೆಯಲ್ಲಿಲ್ಲ. ಒಳ್ಳೆಯ ಮುತ್ಸದ್ದಿ ಒಳ್ಳೆಯ ಹಿರಿಯ ರಾಜಕಾರಣಿಯನ್ನು ಕಳೆದುಕೊಂಡು ಇಡೀ ಬೀದರ್ ಜಿಲ್ಲೆಗೆ, ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ಮತ್ತು ನಮಗೆಲ್ಲರಿಗೂ ಬಹಳಷ್ಟು ನೋವಾಗಿದೆ, ಹಾನಿಯು ಆಗಿದೆ. ಅಜಾತಶತ್ರುವಾಗಿ ಶ್ರೀ ರಾಮಚಂದ್ರ ವೀರಪ್ಪನವರು ತಮ್ಮ ರಾಜಕೀಯ ಮತ್ತು ವೈಯಕ್ತಿಕ ಜೀವನವನ್ನು ಕಳೆದಿದ್ದಾರೆ. ಶ್ರೀ ರಾಮಚಂದ್ರ ವೀರಪ್ಪನವರ ಹೆಸರು ನಮ್ಮ ಬೀದರ್ ಜಿಲ್ಲೆಯಲ್ಲಿ ಶಾಶ್ವತವಾಗಿ ಉಳಿಯುವಂತೆ ಸರ್ಕಾರ, ನಮ್ಮ ಮಾನ್ಯ ಮುಖ್ಯಮಂತ್ರಿಗಳು ಕಾಳಜಿವಹಿಸಿ ಏನಾದರೂ ಮಾಡುತ್ತಾರೆಂದು ನಾನು ನಂಬಿಕೊಂಡಿದ್ದೇನೆ; ಪ್ರೊ: ವೆಂಕಟಗಿರಿಗೌಡರು ಹಳೆಯ ಸಂಸದರು, ಹಿರಿಯರು ನಮ್ಮನ್ನು ಅಗಲಿರುವುದರಿಂದ ನಮಗೆ ಬಹಳಷ್ಟು ಹಾನಿಯಾಗಿದೆ, ಅವರ ಆತ್ಮಕ್ಕೆ ಶಾಂತಿ ಸಿಗಬೇಕು, ಅವರ ಕುಟುಂಬಕ್ಕೆ ದೇವರು ಧೈರ್ಯವನ್ನು ಕೊಡಬೇಕು ಎಂದು ಹೇಳಿ, ನನ್ನ ಎರಡು ಸಂತಾಪ ಸೂಚಕಗಳನ್ನು ಮುಗಿಸುತ್ತಾ, ತಾವು ನನಗೆ ಮಾತನಾಡಲು ಸಮಯವನ್ನು ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು : ತಮಿಳುನಾಡಿನ ಕುಂಭಕೋಣಂನಲ್ಲಿ ಒಂದು ಶಾಲೆಯಲ್ಲಿ ಹಲವು ಮಕ್ಕಳ ಸಾವಿಗೆ ಕಾರಣವಾದ ಬೆಂಕಿ ಅನಾಹುತ ಗಹನವಾದುದು, ಅಲ್ಲದೆ ಅತ್ಯಂತ ದೊಡ್ಡ ಬೆಂಕಿ ಅನಾಹುತ, ಇಂತಹ ಅಹಿತಕರ ಘಟನೆ ಪುನರಾವರ್ತನೆಯಾಗದಿರಲಿ, ಹಾಗೂ ಹಸುಳೆಗಳನ್ನು ಕಳೆದುಕೊಂಡ ಆ ತಂದೆ–ತಾಯಿಗಳಿಗೆ ಮತ್ತು ಅವರ ಬಂಧುಗಳಿಗೆ ದುಃಖವನ್ನು ಭರಿಸುವ ಶಕ್ತಿ ಒದಗಲೆಂದು ನಾನೂ ಸಹ ಮಾನ್ಯ ಸದಸ್ಯರುಗಳ ಭಾವನೆಗಳಿಗೆ ಸ್ಪಂಧಿಸುತ್ತೇನೆ. ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಒಂದು ನಿಮಿಷ ಎದ್ದುನಿಂತು ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು : ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬದವರಿಗೆ ಕಳುಹಿಸಿ ಕೊಡಲಾಗುವುದು. ಈಗ ಪ್ರಶ್ನೋತ್ತರ ಸಮಯ ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು.

2) ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ:

ಛಾಪಾ ಕಾಗದ ಹಗರಣದಲ್ಲಿ ನಿವೃತ್ತ ಪೊಲೀಸ್ ಅಧಿಕಾರಿ ಸಂಗ್ರಾಮ್‌ಸಿಂಗ್ ಸಿ.ಬಿ.ಐ.ನಿಂದ ಬಂಧನವಾದ ಮೇಲೆ ನೀಡಿರುವ ಹೇಳಿಕೆ ಬಗ್ಗೆ

+ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ನಾನು ಪ್ರತಿಪಕ್ಷದ ನಾಯಕನಾಗಿರುವುದರಿಂದ ದಯಮಾಡಿ ನಾನು ಹೇಳುವ ನಾಲ್ಕು ಮಾತುಗಳನ್ನು ತಾವು ಕೇಳಿ, ಅಮೇಲೆ ಬೇಕಾದರೆ ತಾವು ಏನಾದರೂ ತೀರ್ಪನ್ನು ಕೊಡಿ, ನಾನು ತಮಗೆ ತಲೆಬಾಗುತ್ತೇನೆ. ನಾನು ತಮ್ಮಲ್ಲಿ ಹಾಗೂ ಆಡಳಿತ ಪಕ್ಷದ ಸ್ನೇಹಿತರಲ್ಲಿ ವಿನಂತಿಯನ್ನು ಮಾಡುವುದು, ಹೋದಬಾರಿ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಬೇರೆ ಬೇರೆ ಕಾರಣಕ್ಕಾಗಿ ಆಗಲಿಲ್ಲ, ಅದರ ಅರಿವು ನಮ್ಮೆಲ್ಲರಿಗೂ ಇದೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಏಕೆ ಗಲಾಟೆಯಾಯಿತು, ತಾವು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬಹುದಾಗಿತ್ತಲ್ಲಾ. ಅದನ್ನು ಮಾಡಿದ್ದು ತಾವು ತೇನೆ?

(ಗೊಂದಲ)

ಅಧ್ಯಕ್ಷರು : ಮಾನ್ಯ ಪ್ರತಿಪಕ್ಷದ ನಾಯಕರಲ್ಲಿ ನನ್ನ ವಿನಂತಿ, ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ಇದು ಏನಿದು? ಪ್ರಶ್ನೋತ್ತರ ವೇಳೆ ಆದ ಮೇಲೆ ನಾನು ನಿಮ್ಮ ನಿಲುವಳಿ ಸೂಚನೆ ಬಗ್ಗೆ ಕೇಳುತ್ತೇನೆ. ಈಗ ಪ್ರಶ್ನೋತ್ತರಗಳು ನಡೆಯುವುದಕ್ಕೆ ತಾವು ಸಹಕಾರವನ್ನು ಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನನ್ನದೊಂದು ವಿನಂತಿ ಇದೆ. ಈ ಮನೆಯಲ್ಲಿ ಹಾಗೂ ಲೋಕಸಭೆಯಲ್ಲಿ ಅನೇಕ ಸತ್ ಸಂಪ್ರದಾಯಗಳು ನಡೆದಿವೆ. ಅದಕ್ಕಾಗಿ ನಾನು ತಮ್ಮಲ್ಲಿ ಇಷ್ಟೇ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಮಾನ್ಯ ಡಿ.ಕೆ. ಶಿವಕುಮಾರ್‌ರವರಿಗೆ ಏಕೆ ಬೇಸರವಾಯಿತೆಂಬುದು ನನಗೆ ಗೊತ್ತಿಲ್ಲ. ನಾನು ಏನು ಹೇಳುವುದಕ್ಕೆ ಹೊರಟೆ ಎಂದರೆ, ಈ ಮನೆಯಲ್ಲಿ ಅನೇಕ ಪ್ರಮುಖವಾದ ವಿಷಯಗಳು ಚರ್ಚೆಯಾಗಬೇಕಾಗಿದೆ. ಕಳೆದ 4-5 ತಿಂಗಳುಗಳಿಂದ ಚುನಾವಣೆ ಮತ್ತು ಬೇರೆ ಬೇರೆ ಕಾರಣಗಳಿಂದಾಗಿ ಜನರ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆಯಾಗಿರುವುದಿಲ್ಲ. ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿವೆ, ಸರ್ಕಾರದ ಗಮಕ್ಕೆ ತರಬೇಕಾದಂಥ ಅನೇಕ ವಿಷಯಗಳು ಇವೆ. ಅನೇಕ ಜನ ಹೊಸಬರು ಶಾಸಕರಾಗಿ ಬಂದಿದ್ದಾರೆ, ಅವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕಾಗಿದೆ. ನಾನು ಇಲ್ಲಿ ತಂದಿರುವಂಥ ನಿಲುವಳಿ ಸೂಚನೆಯನ್ನು ಓದುತ್ತೇನೆ, ಅದರ ಮಹತ್ವವನ್ನು ನೀವು ಅರ್ಥಮಾಡಿಕೊಳ್ಳಿ, ಈ ನಿಲುವಳಿ ಸೂಚನೆ ಕೇವಲ ಸಂಗ್ರಾಮ್‌ಸಿಂಗ್ ಮೊನ್ನೆ ಕೋರ್ಟಿನಲ್ಲಿ ಹೇಳಿರುವಂಥ ಹೇಳಿಕೆಗಳಿಗೆ ಮಾತ್ರ ಸೀಮಿತವಾಗಿಲ್ಲ. ನಮ್ಮ ನಿರೀಕ್ಷೆ ಮೀರಿ ಮೊನ್ನೆ ತಾನೆ ಆಸ್ಪತ್ರೆಯಲ್ಲಿ ಇಬ್ಬರು ವೈದ್ಯಾಧಿಕಾರಿಗಳು ಸುಳ್ಳು ಸರ್ಟಿಫಿಕೇಟ್‌ಗಳನ್ನು ಕೊಟ್ಟಿದ್ದು ಬಂಧನವಾಗಿರತಕ್ಕ ಸಂದರ್ಭ ಉಂಟಾಗಿದೆ. ಅನೇಕ ವಿಷಯಗಳು ಹೊರಗಡೆ ಬರುತ್ತಿವೆ, ದೇಶದ ಆರ್ಥಿಕ ಪರಿಸ್ಥಿತಿಯನ್ನು ಬುಡಮೇಲು ಮಾಡತಕ್ಕಂಥ ಈ ವಿಷಯದ ಬಗ್ಗೆ ಪ್ರಾಣದ ಹಂಗನ್ನು ತೊರೆದು, ಪ್ರಾಣಭಯದ ಅನೇಕ ದೂರವಾಣಿಗಳು ಬಂದ ಮೇಲೂ ಸಹ ಕಳೆದ ಎರಡೂವರೆ ವರ್ಷಗಳಿಂದ ಆ ಮನೆಯಲ್ಲಿ (ಮೇಲ್ಮನೆ) ನಾನು ಸತತವಾಗಿ ವಿವರಣೆಯನ್ನು ಕೊಟ್ಟಿರುತ್ತೇನೆ. ಇವತ್ತು ಪ್ರಶ್ನೋತ್ತರ ಕಾಲವನ್ನು ತಾವು ಬದಗೊತ್ತಿ, ಈ ಮಹತ್ತರವಾದಂಥ ವಿಷಯ ಇನ್ನು ಅನೇಕ ತಿರುವುಗಳನ್ನು ಪಡೆಯುವುದಕ್ಕೆ ಮುಂಚೆ ತಾವು ಚರ್ಚೆಗೆ ಅವಕಾಶ ಕಲ್ಪಿಸಿಕೊಡಬೇಕು. ನನ್ನ ಮೇಲೆ ಯಾವ ಪೂರ್ವ ಪೀಡಿತ ವಿಚಾರವಿತ್ತು ಅದು ನಿವಾರಣೆಯಾಗಬೇಕಾಗಿದೆ. ಆ ಭಾಗದಲ್ಲಿ ಕುಳಿತಿರುವಂಥ, ಹಿಂದೆ ಆದಂಥ ಮಾನ್ಯ ಸಚಿವರು, ಈಗ ಇರುವಂಥ ಸಚಿವರು ಅವರ ಬಗ್ಗೆ ನನಗೆ ಗೌರವವಿದೆ. ಯಾರೋ ಒಬ್ಬ ಎಲ್ಲೋ ಒಂದು ಹೇಳಿಕೆಯನ್ನು ಕೊಟ್ಟ ಎಂದಾಕ್ಷಣಕ್ಕೆ ಅದರ ಸತ್ಯಾಸತ್ಯತೆಗಳನ್ನು ತಿಳಿದುಕೊಳ್ಳದೆ ಮಾತನಾಡುವಂಥ ವ್ಯಕ್ತಿ ನಾನಲ್ಲ. ನನ್ನ ವಿಚಾರ ಇಷ್ಟೆ, ಕಳೆದ ಮೂರು ವರ್ಷಗಳಲ್ಲಿ ಈ ಘಟನೆಯಾದ ಮೇಲೆ ಅಜ್ಮೀರ್‌ನಲ್ಲಿ ಕರೀಂಲಾಲ್ ಬಂಧನವಾದ ದಿವಸದಿಂದ ಇವತ್ತಿನವರೆಗೆ, ಸ್ವಾಮಿ ತಾವು ಆಶ್ಚರ್ಯಪಡುತ್ತೀರಿ! ಅನೇಕ ಪುಸ್ತಕಗಳನ್ನು ನಾನು ಪ್ರಿಂಟ್ ಮಾಡಿ ನಮ್ಮೆಲ್ಲಾ ಶಾಸಕರಿಗೆ ನಾನು ಕಳುಹಿಸಿಕೊಟ್ಟಿದ್ದೇನೆ. ಕಳೆದ ಎರಡುವರೆ ವರ್ಷಗಳಿಂದ ನಾನು ಏನು ಪುಸ್ತಕಗಳನ್ನು ಪ್ರಿಂಟ್ ಮಾಡಿ ಹಂಚಿರುತ್ತೇನೆ, ಏನೇನು ಮಾಹಿತಿಗಳನ್ನು

ಕೊಟ್ಟಿದ್ದೇನೆ, ಆ ಎಲ್ಲಾ ವಿಷಯಗಳನ್ನು ಯಾವ ಹೆಸರಿನಲ್ಲಿ ಹೇಳಿದ್ದೆ ಅವೆಲ್ಲಾ ಸತ್ಯವಾಗಿದೆ. ಎರಡೂವರೆ ವರ್ಷಗಳ ಹಿಂದೆಯೇ ಸರ್ಕಾರ ಬಿಗಿ ಕ್ರಮವನ್ನು ತೆಗೆದುಕೊಂಡಿದ್ದರೆ ಈ 40–50 ಸಾವಿರ ಕೋಟಿ ರೂ.ಗಳ ವ್ಯವಹಾರವನ್ನು ತಡೆಯಬಹುದಾಗಿತ್ತು. ದುರ್ದೈವೆಂದರೆ ಇಲ್ಲಿ ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗ ಎಲ್ಲವೂ ಒಂದು ರೀತಿಯ ಅನುಮಾನ ಪಡುವಂಥ ಪರಿಸ್ಥಿತಿ ಬಂದಿರುವಂಥ ಈ ಸಂದರ್ಭದಲ್ಲಿ, ದಯಮಾಡಿ ನಾನು ತಮ್ಮಲ್ಲಿ ಪ್ರಾರ್ಥನೆಯನ್ನು ಮಾಡುತ್ತೇನೆ. ಈ ಭಾಗದಲ್ಲಿ ಕುಳಿತಿರುವಂಥ ಅನೇಕ ಜನ ಶಾಸಕರು, ಇದರ ಮಹತ್ವ ಸದನದ ಕಾರ್ಯಕಲಾಪಗಳ ಮಹತ್ವ ಗೊತ್ತಿದ್ದರೂ ಸಹ ಈ ನಿಲುವಳಿ ಸೂಚನೆಗೆ ಹೆಚ್ಚಿನ ಒಂದು ಪ್ರಾತಿನಿಧ್ಯವನ್ನು ಕೊಟ್ಟರೆ ಇದನ್ನು ಕ್ಯೂಶ್ಚನ್ ಅವರಿಗೆ ಮುಂಚೆ ತೆಗೆದುಕೊಂಡರೆ ಇದರ ವಿಚಾರ ಇಡೀ ದೇಶಕ್ಕೆ ತಿಳಿಯುತ್ತದೆ. ಅದರ ಮಹತ್ವ ಅರ್ಥವಾಗುತ್ತದೆ, ಇದು ಲೋಕಸಭೆಯಲ್ಲಿ ಪ್ರಸ್ತಾಪವಾಗಿದೆ, 10–12 ರಾಜ್ಯಗಳಲ್ಲಿ ಈ ವ್ಯಕ್ತಿಯ ಕೈವಾಡ ನಡೆದಿದೆ, ದುರ್ದೈವವೆಂದರೆ ಸ್ವಾತಂತ್ರ್ಯ ಬಂದ ಮೇಲೆ ಮೊದಲ ಬಾರಿಗೆ ಜೈಲಿನೊಳಗಡೆ, ಜೈಲು ಅಧಿಕಾರಿಗಳು ಅವನ ಜೊತೆಯಲ್ಲಿ ಶಾಮೀಲಾಗಿರವಂಥದ್ದು, ಮೊಬೈಲ್ ಫೋನ್ ಸುಟ್ಟು ಹಾಕಿರುವಂಥದ್ದು, ಆ ಜೈಲಿನೊಳಗಡೆಯೇ 15 ರಿಂದ 20 ಸಾವಿರ ಕೋಟಿ ರೂಪಾಯಿಗಳ ವ್ಯವಹಾರ ನಡೆದಿರುವುದು, ದೇಶದ ಮೂಲೆಮೂಲೆಗಳಿಂದ ಈ ಆರೋಪಿಗಳಿಗೆ ಬೆಂಬಲ ಕೊಡುತ್ತಿದ್ದಂತಹ ದೇಶದ್ರೋಹಿಗಳು ಜೈಲಿನೊಳಗಡೆಯೇ ಸಾರಾಸಗಟಾಗಿ ಬಂದು ಹೋಗಿರುವುದು, ಇಂತಹ ಸಮಯದಲ್ಲಿ ನಮ್ಮ ಗೃಹ ಇಲಾಖೆ ಮತ್ತು ಇಂಟೆಲಿಜೆನ್ಸಿ ಇಲಾಖೆಯು ಏನು ಮಾಡುತ್ತಿತ್ತು ಸ್ವಾಮಿ? ಇದರ ಬಗ್ಗೆ ಇಡೀ ದೇಶದ ಜನರು ಕಾತುರತೆಯಿಂದ ತಲ್ಲಣಗೊಂಡು ನೋಡುತ್ತಿರುವಂತಹ ಸಂದರ್ಭದಲ್ಲಿ ಸಂಗ್ರಾಮ್‌ಸಿಂಗ್‌ನ ಹೇಳಿಕೆ ಅನೇಕರು ಇದಕ್ಕೆ ಬೆಂಬಲವಾಗಿರ ತಕ್ಕಂತಹ ಮತ್ತು ಪೂರಕವಾಗಿರುವಂತಹ ಸಾಕ್ಷಾಧಾರಗಳು ನನ್ನ ಹತ್ತಿರ ಇವೆ. ಈ ಎಲ್ಲಾ ಸಂಗತಿಗಳ ಬಗ್ಗೆ ಸರ್ಕಾರದ ಗಮನಕ್ಕೆ ತಂದರೆ ಈ ನಿಮಿಷದಿಂದ ಅದು ಮುಂದೆ ನಡೆಯುವಂತಹ ಈ ಲೂಟಿಗೆ ಈ ದೇಶದ್ರೋಹಿ ಚಟುವಟಿಕೆಗೆ ಮತ್ತು ಈ ದೇಶದ ಆರ್ಥಿಕ ಪರಿಸ್ಥಿತಿಯನ್ನು ಬುಡಮೇಲು ಮಾಡಿ ದೇಶದ್ರೋಹದ ಚಟುವಟಿಕೆಗಳಿಗೆ ಹಣ ಕೊಡುವಂತಹ ಈ ವ್ಯವಹಾರಕ್ಕೆ ಕೊನೆಯಾಗಬಹುದು ಎಂಬ ದೃಷ್ಟಿಯಿಂದ ನಾನು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆಯೇ ಹೊರತು ಇದರಲ್ಲಿ ಬೇರೆ ಏನು ದೃಷ್ಟಿಯಿಲ್ಲ. ಅದಕ್ಕಾಗಿ ನೌನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ದಯಮಾಡಿ ನಮ್ಮ ಆಡಳಿತ ಪಕ್ಷದ ಸ್ನೇಹಿತರು ಈ ಕಡೆ ಇರುವಂತಹ ಸ್ನೇಹಿತರು ಹಾಗೂ ಹೊಸಬರು ಹಾಗು ಅನುಭವ ಇರುವಂತಹವರೂ ಕೂಡ ಇದ್ದಾರೆ. ಯಡಿಯೂರಪ್ಪ ಈ ವಿಷಯವನ್ನು ಇವತ್ತು ಹೊಸದಾಗಿ ಎನೂ ಪ್ರಸ್ತಾಪ ಮಾಡುತ್ತಿಲ್ಲ. ನಮ್ಮ ಹಿರಿಯ ಸದಸ್ಯರಾದಂತಹ ವಿರೋಧ ಪಕ್ಷದಲ್ಲಿ ಕೆಲಸ ಮಾಡಿದಂತಹ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಮತ್ತು ಮಾನ್ಯ ಎಂ.ಪಿ. ಪ್ರಕಾಶ್‌ರವರು ಮತ್ತು ಇವರೆಲ್ಲರಿಗಿಂತಲೂ ಹೆಚ್ಚಾಗಿ ಈ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಧರ್ಮಸಿಂಗ್‌ರವರ ಬಗ್ಗೆ ನನಗೆ ಗೌರವವಿದೆ. ಅವರು ಈ ಆಡಳಿತದ ಅವಧಿಯಲ್ಲಿ ಸುಸೂತ್ರವಾಗಿ ಯಾವುದೇ ಅಡ್ಡಿ ಆತಂಕಗಳು ಇಲ್ಲದೆಯೇ ನಾಲ್ಕೈದು ತಿಂಗಳುಗಳಿಂದ ಅಭಿವೃದ್ಧಿ ಕಾರ್ಯಗಳು ನಿಂತಿರುವಂತಹ ಸಂದರ್ಭದಲ್ಲಿ ಈ ರಾಜ್ಯದ ಅಭಿವೃದ್ಧಿ ಕಾರ್ಯಗಳ ಬಗ್ಗೆ ನಾವೆಲ್ಲರೂ ಚರ್ಚೆ ಮಾಡಿ ಅದಕ್ಕೆ ಪರಿಹಾರವನ್ನು ಹುಡುಕಿ, ಸಮಸ್ಯೆಗೆ ಪರಿಹಾರವನ್ನು

ಹುಡುಕುವಂತಹ ವ್ಯಕ್ತಿ ನಾನು. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ನಾನು ಪ್ರತಿಪಕ್ಷದ ಸ್ಥಾನದಲ್ಲಿ ಕುಳಿತುಕೊಂಡು ಈ ದೇಶದ ಉದ್ದಗಲಕ್ಕೂ ಚರ್ಚೆಯಾಗಿರುವಂತಹ ವಿಷಯ, ಇದು ಪಾರ್ಲಿಮೆಂಟ್‌ನಲ್ಲಿ ಚರ್ಚೆಯಾಗಿರುವಂತಹ ವಿಷಯ ಕರ್ನಾಟಕದ ಒಬ್ಬ ಕರೀಂಲಾಲ್. ಈ ವಿಷಯವನ್ನು ನಾನು ಹೇಳುತ್ತಿಲ್ಲ ಸ್ವಾಮಿ,

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರೆ, ನಿಯಮ 64 ಸ್ಪಷ್ಟವಾಗಿ ಹೇಳುತ್ತದೆ: ನಾನು ಓದುತ್ತೇನೆ ತಾವು ಕೇಳಿ. ಅಧ್ಯಕ್ಷರು 60ನೇ ನಿಯಮದ ಮೇರೆಗೆ ಒಪ್ಪಿಗೆಯನ್ನು ಕೊಟ್ಟರೆ ಚರ್ಚಿಸಲು ಉದ್ದೇಶಿಸಿರುವ ವಿಷಯವು ಕ್ರಮಬದ್ಧವಾಗಿದೆ ಎಂದು ಅಭಿಪ್ರಾಯವನ್ನು ಪಟ್ಟರೆ, ಪ್ರಶ್ನೋತ್ತರಗಳ ತರುವಾಯ ಹಾಗೂ ಕಾರ್ಯಕ್ರಮಗಳ ಪಟ್ಟಿಯಲ್ಲಿರುವ ಇತರ ವಿಷಯವನ್ನು ಪ್ರಾರಂಭಿಸುವ ಮುಂಚೆ ಸಂಬಂಧಪಟ್ಟ ಸದಸ್ಯರ ಹೆಸರನ್ನು ಕರೆಯಬೇಕು. ಇದರಲ್ಲಿ ಸ್ಪಷ್ಟವಾಗಿ ಇದೆ. ಆ ಕಾರಣಕ್ಕಾಗಿ ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿಯನ್ನು ಮಾಡುತ್ತೇನೆ.

ಶ್ರೀ ಆರ್. ಅಶೋಕ್ : ಸಾಕಷ್ಟು ಬಾರಿ ನಿಲುವಳಿ ಸೂಚನೆಯನ್ನು ಪ್ರಶ್ನೋತ್ತರ ಅವಧಿಗಿಂತ ಮುಂಚೆಯೇ ತೆಗೆದುಕೊಂಡಿದ್ದಾರೆ.

ಅಧ್ಯಕ್ಷರು : ಪ್ರಶ್ನೋತ್ತರ ಆದ ಮೇಲೆ ಅದಕ್ಕಿಂತಲೂ ಮೊದಲು ಯಾರು ಸಿಗ್ನೇಟರೀಸ್ ಇದ್ದಾರೆ, ಅದನ್ನು ನಾನು ನೋಡುತ್ತೇನೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಸಹಕರಿಸಬೇಕು. ನಾವು ನಿಯಮಗಳ ರೀತ್ಯಾ ನಡೆಯಬೇಕಾಗಿದೆ. ಆದ್ದರಿಂದ ದಯಮಾಡಿ ತಾವು ಸಹಕರಿಸಬೇಕು. ನಾನು ನಿಮ್ಮ ವಿಚಾರವನ್ನು ಕೇಳುತ್ತೇನೆಂದು ಹೇಳಿದ್ದೇನೆ. ಈಗ ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಗೌರವಕೊಟ್ಟು, ಅವರು ಏನು ಸಬ್‌ಮಿಟ್ ಮಾಡಿದ್ದಾರೆ ಅದನ್ನು ನಾನು ಕೇಳಿದ್ದೇನೆ. ನಾನು ಈಗ ನಿಯಮಗಳನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಆ ಮೇಲೆ ನಾನು ಕೇಳುತ್ತೇನೆ, ಪ್ರಶ್ನೋತ್ತರ ಆದ ನಂತರ ತೆಗೆದು ಕೊಳ್ಳೋಣ.

ಶ್ರೀ ಜಗದೀಶ್ ಶೆಟ್ಟರ್ : ಹಿಂದೆ ಈ ಬಗ್ಗೆ ಸಾಕಷ್ಟು ಉದಾಹರಣೆಗಳು ಇವೆ.

ಅಧ್ಯಕ್ಷರು : ನಾವು ನಿಯಮಗಳ ಪ್ರಕಾರ ನಡೆದುಕೊಳ್ಳೋಣ.

ಶ್ರೀ ಜಗದೀಶ್ ಶೆಟ್ಟರ್ : ಹಿಂದೆ ಕಂಬಾಲಪಲ್ಲಿ ಪ್ರಕರಣ ಆದಂತಹ ಸಂದರ್ಭದಲ್ಲಿ ಎಲ್ಲಾ ನಿಯಮಗಳನ್ನು ಬದಿಗೊತ್ತಿ ಆ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿರುವಂತಹ ಸಾಕಷ್ಟು ಉದಾಹರಣೆಗಳು ಇವೆ.

ಅಧ್ಯಕ್ಷರು : ಇದು ಸರಿಯಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಕೊಶ್ಚನ್ ಹವರ್‌ನ್ನು ಬದಿಗೊತ್ತಿ ಹಲವಾರು ವಿಷಯಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿರುವಂತಹ ಸಾಕಷ್ಟು ಸಂಪ್ರದಾಯಗಳು ಇಲ್ಲಿ ಇವೆ. ಅದಕ್ಕಾಗಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು : ಮಾನ್ಯ ಸದಸ್ಯರೆಲ್ಲರೂ ದಯಮಾಡಿ ಕುಳಿತುಕೊಳ್ಳಬೇಕು. ನೋ, ನೋ, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಾವು ನಿಯಮಗಳ ಅಡಿಯಲ್ಲಿ ಸಭೆಯನ್ನು

ನಡೆಸಬೇಕಾಗುತ್ತದೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ಈಗ ಮಾನ್ಯ ದೊಡ್ಡನಗೌಡ ಹನುಮಗೌಡ ಪಾಟೀಲರು ಪ್ರಶ್ನೆ ಕೇಳಿ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ನಾವು ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆ.

(ಗೊಂದಲ)

ಅಧ್ಯಕ್ಷರು : ಸದನ ನಡೆಯುವುದಕ್ಕೆ ದಯಮಾಡಿ ಎಲ್ಲರೂ ಅವಕಾಶವನ್ನು ಮಾಡಿಕೊಡಬೇಕು. ದಯಮಾಡಿ ಪ್ರಶ್ನೋತ್ತರ ವೇಳೆಯಾದ ನಂತರ ನಾನು ಕೇಳುವುದಕ್ಕೆ ಸಿದ್ಧನಿದ್ದೇನೆ. ನಾವುಗಳೆಲ್ಲರೂ ನಿಯಮಗಳ ಪ್ರಕಾರ ನಡೆದುಕೊಳ್ಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನನ್ನದು ಒಂದೇ ಪ್ರಾರ್ಥನೆ, ನೀವು ಏನು ತೀರ್ಪನ್ನು ಕೊಡುತ್ತೀರೋ ಅದಕ್ಕೆ ನಾನು ತಲೆಬಾಗುತ್ತೇನೆ. ದಯಮಾಡಿ, ತಾವು ಹಿಂದೆ ನಡೆದಿರುವಂತಹ ಸಂಪ್ರದಾಯಗಳನ್ನು ನೋಡಿ ವಿಶೇಷವಾದಂತಹ ಸಂದರ್ಭಗಳು ಬಂದಾಗ ಲೋಕಸಭೆಯಲ್ಲಿ ಮತ್ತೆ ಇಲ್ಲಿ ಕೊಶ್ಚನ್ ಹವರ್‌ನ್ನು ರದ್ದು ಮಾಡಿ ಚರ್ಚೆ ಮಾಡಿದ್ದು ಉಂಟು. ನ್ಯಾಯವಾಗಿ ಇದು ಎಷ್ಟು ಮಹತ್ತರವಾದಂತಹ ವಿಷಯವೆಂದರೆ, ನಾವು ಈ ಸರ್ಕಾರದ ವಿರುದ್ಧ ನೋ ಕಾನ್‌ಫಿಡೆನ್ಸ್ ಮೋಷನ್‌ನ್ನು ಮೂವ್ ಮಾಡುವಂತಹ ವಿಷಯ, ಆದರೆ ಸರ್ಕಾರ ಇನ್ನೂ ಅಸ್ತಿತ್ವಕ್ಕೆ ಬಂದು ಎರಡು ತಿಂಗಳುಗಳು ಆಗಿಲ್ಲ, ಕಾರ್ಯಕಲಾಪಗಳು ನಡೆಯಬೇಕು, ಬೇರೆ ರೂಲ್‌ನಲ್ಲಿ ಅನ್ವಯವಾಗುವಂತೆ ಚರ್ಚೆ ನಡೆಯಬೇಕು ಎಂಬ ಒಂದೇ ಒಂದು ಕಾರಣಕ್ಕೋಸ್ಕರ ಪ್ರತಿಪಕ್ಷದ ಮುಖಂಡರೆಲ್ಲರೂ ಕುಳಿತುಕೊಂಡು ಸಮಾಲೋಚನೆ ಮಾಡಿ ಇದನ್ನು ನಿಲುವಳಿ ಸೂಚನೆಯ ಮೂಲಕ ಪ್ರಸ್ತಾಪ ಮಾಡಿ ಸರ್ಕಾರದಿಂದ ಉತ್ತರವನ್ನು ಪಡೆದು ಈ ದೇಶದ ಆರ್ಥಿಕ ಪರಿಸ್ಥಿತಿಯನ್ನು ಬುಡಮೇಲು ಮಾಡುವುದರಲ್ಲಿ ಅನೇಕ ಹಿಂದಿನ ಸಚಿವರು, ಹಾಲಿ ಸಚಿವರು, ಪ್ರಮುಖರು ಶಾಮೀಲಾಗಿದ್ದಾರೆ ಎನ್ನುವಂತಹದ್ದು ಏನಿದೆ ಇದು ಗೌರವವನ್ನು ತರುವಂತಹದ್ದು ಅಲ್ಲ, ಇದನ್ನು ಸಿಬಿಐಗೆ ವಹಿಸಬೇಕಾಗುತ್ತದೆ, ಸಿಬಿಐ ಏತಕ್ಕಾಗಿ ಕೈಕಟ್ಟಿಕೊಂಡು ಕುಳಿತಿದೆ ಗೊತ್ತಿಲ್ಲ. ಇವತ್ತು ಬಹಳ ಆಶ್ಚರ್ಯವಾಗುತ್ತದೆ, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಗೃಹಸಚಿವರು ಇಲ್ಲಿಯೇ ಕುಳಿತಿದ್ದಾರೆ, ಇವತ್ತು ಸ್ಟಾಂಪಿಟ್ ಅಧಿಕಾರಿ ಇವತ್ತು ಶ್ರೀಕುಮಾರ್ ಪತ್ರಿಕಾ ಹೇಳಿಕೆಯನ್ನು ಬಹಿರಂಗವಾಗಿ ಕೊಡುತ್ತಾರೆ. ಸ್ವಾಮಿ ನಾನು ಕೇಳುತ್ತೇನೆ, ಇನ್‌ವೆಸ್ಟಿಗೇಷನ್ ಅಧಿಕಾರಿಗೆ ಯಾರೋ ಒಬ್ಬ ಹೇಳಿಕೆಯನ್ನು ಕೊಟ್ಟ ಎಂದು ಅದಕ್ಕೆ ಅವರು ಪತ್ರಿಕೆಯಲ್ಲಿ ಉತ್ತರವನ್ನು ಕೊಡುವುದಕ್ಕೆ ಪ್ರಾರಂಭ ಮಾಡುತ್ತಾರೆ ಅಂದರೆ ಅವರ ಮೇಲೆ ನೀವು ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಧಿಕಾರಿಯಾಗಿ ಅಧಿಕಪ್ರಸಂಗ ಮಾಡಿ ನಡೆಯುವುದಕ್ಕಾಗುವುದಿಲ್ಲ, ಆತನು ಕಾನೂನಿನ ಚೌಕಟ್ಟು ಮೀರಿ ಪತ್ರಿಕಾ ಹೇಳಿಕೆಯನ್ನು ಕೊಡುವುದಕ್ಕಾಗುವುದಿಲ್ಲ. ನಾವು ಸ್ಟಾಂಪಿಟ್ ಅಧಿಕಾರಿಗಳಿಗೆ ಗೌರವವನ್ನು ಕೊಟ್ಟಿದ್ದೇವೆ. ಇದೇ ಸ್ಟಾಂಪಿಟ್ ಅಧಿಕಾರಿಗಳು ಬೆಂಗಳೂರು ಸುತ್ತಮುತ್ತ ಇದ್ದು ಅನೇಕ ಪ್ರಿಟಿಂಗ್ ಪ್ರೆಸ್‌ಗಳು ಇದ್ದವು ಅವನ್ನು ಏತಕ್ಕಾಗಿ ಸೀಜ್ ಮಾಡಲಿಲ್ಲ? ಅನೇಕ ಅಧಿಕಾರಿಗಳ ಮೇಲೆ ಏತಕ್ಕಾಗಿ ಕ್ರಮವನ್ನು ತೆಗೆದುಕೊಳ್ಳಲಿಲ್ಲ? ಇವತ್ತು ಅನೇಕ ಪೊಲೀಸ್ ಅಧಿಕಾರಿಗಳು ಶಾಮೀಲಾಗಿದ್ದರೂ ಕೂಡ ಈ ಬಗ್ಗೆ

ಏತಕ್ಕಾಗಿ ಕ್ರಮವನ್ನು ತೆಗೆದುಕೊಳ್ಳಲಿಲ್ಲ? ಉನ್ನತ ಅಧಿಕಾರಿಯಾದಂತಹ ಭಾವ ಅಂಥವರು ಈ ಬಗ್ಗೆ ಏತಕ್ಕಾಗಿ ಕ್ರಮವನ್ನು ತೆಗೆದುಕೊಳ್ಳಲಿಲ್ಲ?

ಅಧ್ಯಕ್ಷರು : ದಯಮಾಡಿ ಮಾನ್ಯ ವಿರೋಧ ಪಕ್ಷದ ನಾಯಕರೆ, ಅವಕಾಶವನ್ನು ಮಾಡಿಕೊಡಿ. ಈಗ ನಾನು ಮಾನ್ಯ ದೊಡ್ಡನಗೌಡ ಹನುಮನಗೌಡ ಪಾಟೀಲ್‌ರವರ ಹೆಸರನ್ನು ಕರೆದಿದ್ದೇನೆ. ಪ್ರಶ್ನೋತ್ತರ ವೇಳೆಯಾದ ನಂತರ ನಾನು ತಮ್ಮ ಮಾತನ್ನು ಕೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಹೊಸದಾಗಿ ಏನೂ ಪ್ರಾರಂಭ ಮಾಡುತ್ತಿಲ್ಲ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ ಕಾಗೇರಿ : ಪ್ರಶ್ನೋತ್ತರವನ್ನು ನಂತರ ತೆಗೆದುಕೊಳ್ಳಲಿ ಎಂದು ಸರ್ಕಾರವೇ ಹೇಳಿಬಿಡಲಿ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಸನ್ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು : ಸಂಸದೀಯ ವ್ಯವಹಾರಗಳ ಸಚಿವರೆ, ನಾನು ಮಾನ್ಯ ದೊಡ್ಡನಗೌಡ ಹನುಮನಗೌಡ ಪಾಟೀಲ್‌ರವರ ಹೆಸರನ್ನು ಕರೆದಿದ್ದೇನೆ. ಪ್ರಶ್ನೋತ್ತರ ಆಗಲಿ, ಅನಂತರ ಅದರ ಬಗ್ಗೆ ಚರ್ಚೆಯಾಗಲಿ.

(ಗೊಂದಲ)

ಅಧ್ಯಕ್ಷರು : ಈಗ ಎರಡೂ ಕಡೆಯವರು ಪ್ರಶ್ನೆಗಳನ್ನು ಕೇಳಿದ್ದಾರೆ ಪ್ರಶ್ನೋತ್ತರ ವೇಳೆ ಬಹಳ ಮುಖ್ಯವಾದುದು, ನಿಯಮಗಳಲ್ಲಿ ಸಹ ಅದರ ಬಗ್ಗೆ ಸ್ಪಷ್ಟವಾಗಿ ಹೇಳಿದೆ. ದಯಮಾಡಿ ಮಾನ್ಯ ಸದಸ್ಯರೆಲ್ಲರೂ ಸಹಕರಿಸಿ.

ಶ್ರೀ ಜಗದೀಶ್ ಶೆಟ್ಟರ್ : ಇದು ಬಹಳ ಮಹತ್ವವಾದಂತಹ ವಿಷಯವಾಗಿರುತ್ತದೆ.

ಅಧ್ಯಕ್ಷರು : ಮಾನ್ಯ ಶೆಟ್ಟರ್‌ರವರೆ, ಪ್ರಶ್ನೋತ್ತರ ವೇಳೆಯಾದ ಮೇಲೆ ನಾನು ಕೇಳುತ್ತೇನೆ. ದಯಮಾಡಿ ಎಲ್ಲರೂ ಅಸೀನರಾಗಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ವಿರೋಧ ಪಕ್ಷದವರ ಸಹಕಾರ ಬೇಡ ನಾವು ಹೇಗೆ ಬೇಕಾದರೂ ಆಡಳಿತವನ್ನು ನಡೆಸಿಕೊಂಡು ಹೋಗುತ್ತೇವೆ ಅಂದರೆ ನಮ್ಮದು ಏನೂ ಅಭ್ಯಂತರವಿಲ್ಲ. ನಮ್ಮ ಜವಾಬ್ದಾರಿ ವಿರೋಧ ಪಕ್ಷದಲ್ಲಿ ಕುಳಿತಾಗ ನಮ್ಮ ಕರ್ತವ್ಯವನ್ನು ನಾವು ನಿರ್ವಹಿಸಬೇಕಾಗುತ್ತದೆ. ನಮ್ಮ ಸಂಸದೀಯ ಸಚಿವರಾದಂತಹ ಶ್ರೀ ಎಂ.ಪಿ. ಪ್ರಕಾಶ್‌ರವರಲ್ಲಿ ಕೇಳುತ್ತೇನೆ ಶ್ರೀ ಪಿ.ಜಿ.ಆರ್. ಸಿಂಧ್ಯಾರವರಲ್ಲಿ ಕೇಳುತ್ತೇನೆ. ಇದೇ ಜಾಗದಲ್ಲಿ ಕುಳಿತು ಆದೆಷ್ಟು ಬಾರಿ ಪ್ರಮುಖವಾದಂತಹ ವಿಷಯಗಳ ಬಗ್ಗೆ ಕ್ವೊಶ್ಚನ್ ಹವರ್‌ನ್ನು ಬದಿಗೊತ್ತಿ ಚರ್ಚೆ ಮಾಡಿಲ್ಲ? ಏತಕ್ಕಾಗಿ ಕ್ವೊಶ್ಚನ್ ಹವರ್‌ನ್ನು ಬದಿಗೊತ್ತುತ್ತಿದ್ದೇವೆ ಅಂದರೆ, ಇದು ಬಹಳ ಮಹತ್ತರವಾದಂತಹ ವಿಷಯವಾಗಿರುವುದರಿಂದ ಈ ನಾಡಿನ ಜನರಿಗೆ ಪ್ರತಿಯೊಂದರ ಬಗ್ಗೆಯೂ ಗೊತ್ತಾಗಬೇಕು, ಸರ್ಕಾರ ಇದರ ಬಗ್ಗೆ ಸೀರಿಯಸ್ಸಾಗಿ ತೆಗೆದುಕೊಳ್ಳಬೇಕು. ಈ ಒಂದು ಅನ್ಯಾಯವು ಕೊನೆಯಾಗಬೇಕು, ಇಡೀ ದೇಶದ ಆರ್ಥಿಕ ಪರಿಸ್ಥಿತಿ ಬುಡಮೇಲು ಮಾಡುವುದಷ್ಟೇ ಅಲ್ಲ, ದೇಶದ್ರೋಹಿ ಚಟುವಟಿಕೆಗಳಿಗೆ ಹಣವು ವಿನಿಯೋಗವಾಗುತ್ತದೆ. ಇಂತಹ ಈ ಘಟನೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುವುದಕ್ಕೆ ಹಿಂದೆ ಮುಂದೆ ನೋಡಿದರೆ ಹೇಗೆ? ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ;

ಅವರು ಇದನ್ನು ಗಂಭೀರವಾಗಿ ಪರಿಗಣಿಸಬೇಕು. ನಾವು ಯಾರ ಬಗ್ಗೆಯೂ ಆರೋಪವನ್ನು ಮಾಡುತ್ತಿಲ್ಲ.

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪ ನವರೇ, ತಾವು ಎರಡು ನಿಮಿಷ ಯಿಲ್ಡ್ ಆಗುತ್ತೀರಾ? ಈಗ ಏನು ಹೇಳಬೇಕಾಗಿದೆ, ಮಾನ್ಯ ವಿರೋಧಪಕ್ಷದ ನಾಯಕರು ಅದರ ಬಗ್ಗೆ ಹೇಳುತ್ತಿದ್ದಾರೆ. ನಾವು ಇದರ ಬಗ್ಗೆ ಗಂಭೀರವಾದಂತಹ ಚರ್ಚೆಯಾಗಲಿ, ಸರ್ಕಾರ ಇದರ ಬಗ್ಗೆ ಸ್ಪಷ್ಟವಾದಂತಹ ಉತ್ತರವನ್ನು ಕೊಡುತ್ತದೆ. ಅವರು ಏನು ನಿಲುವಳಿ ಸೂಚನೆಯನ್ನು ತಂದಿದ್ದಾರೆ, ಅದು ಏನಾದರೂ ಕೂಡ ರೀಸೆಂಟ್ ಆಗಿ ಏನಾದರೂ ಇನ್ಸಿಡೆಂಟ್ ಆಗಿದ್ರೆ ನಿನ್ನೆ ಏನಾದರೂ ಘಟನೆಯಾಗಿದ್ದು. ಅದರ ಬಗ್ಗೆ ನಿಲುವಳಿ ಸೂಚನೆಯನ್ನು ತಂದರೆ ಅದಕ್ಕೆ ಒಂದು ಅರ್ಥವಿದೆ. ನಾವು ಏನು ಹೇಳುತ್ತಿದ್ದೇವೆಂದರೆ, ನಿಲುವಳಿ ಸೂಚನೆಯನ್ನು ಮಂಡಿಸಿ, ಪ್ರಾಸ್ತಾವಿಕವಾಗಿ ಏನು ಮಾತನಾಡಬೇಕಾಗಿದೆ ಅದರ ಬಗ್ಗೆ ಹೇಳಿ, ಯಾವ ತರಹದಲ್ಲಿ ಚರ್ಚೆಯಾಗಬೇಕಾಗಿದೆ ಎಂಬುದು ಮಾನ್ಯ ಸಭಾಧ್ಯಕ್ಷರಿಗೆ ಬಿಟ್ಟಿದ್ದು ಅದರ ಬಗ್ಗೆ ಸರ್ಕಾರ ಉತ್ತರ ಕೊಡುವುದಕ್ಕೆ ಸಿದ್ದವಿದೆ. ಇವತ್ತು ನಾವು ಇಷ್ಟೇ ಹೇಳಬೇಕಾಗಿರುವುದು ಇವತ್ತಿನ ದಿವಸ ಕ್ವೊಶ್ಚನ್ ಹವರ್ ಇದೆ. That is the property of the House. ಇವತ್ತು ಯಾರೂ ಕೂಡ ಸದಸ್ಯರ ಹಕ್ಕನ್ನು ಕಸಿದುಕೊಳ್ಳುವಂತಹದ್ದು ಅಲ್ಲ. ಮಾನ್ಯ ಸಭಾಧ್ಯಕ್ಷರು ಏನು ಹೇಳುತ್ತಿದ್ದಾರೆ ಅಂದರೆ ಪ್ರಶ್ನೋತ್ತರ ವೇಳೆ ಮುಗಿದ ನಂತರ ತೆಗೆದುಕೊಳ್ಳೋಣ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಯಾವ ರೀತಿಯಾಗಿ ಇವತ್ತು ನೀವು ಏನು ಕೆಲವೊಂದು ವಿಷಯಗಳ ಬಗ್ಗೆ ಬಹಳ ತರಾತುರಿಯಾಗಿ ಹೇಳುತ್ತಿದ್ದೀರಿ, That is a dead issue. Already that has been discussed in both the houses.

ಹಿಂದೆ ವಿರೋಧ ಪಕ್ಷದ ನಾಯಕರಾಗಿ ಶ್ರೀ ಜಗದೀಶ್ ಶೆಟ್ಟರ್‌ರವರು ಇದ್ದಾಗ ಕೂಡ ಹಾಗೂ ಮುಖ್ಯಮಂತ್ರಿಗಳು ಸಮರ್ಪಕವಾಗಿ ಆಗಿನ ಗೃಹಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ.

12.40 ಪಿಎಂ

ಇನ್ನೂ ಹೆಚ್ಚು ಬೆಳಕನ್ನು ಚೆಲ್ಲಬೇಕಾದರೆ ಸರ್ಕಾರ ಇದರ ಬಗ್ಗೆ ಉತ್ತರ ಕೊಡುವುದಕ್ಕೆ ತಯಾರಿದೆ. ಮೊದಲ ಪ್ರಶ್ನೋತ್ತರ ಆಗಲಿ. ಅದು ಆದ ಮೇಲೆ ನಾವು ಈ ವಿಚಾರವನ್ನು ಚರ್ಚೆಗೆ ತೆಗೆದುಕ್ಕೊಳ್ಳೋಣ.

ಶ್ರೀ ಬಿ.ಎಸ್. ಯಡಿರಯೂರಪ್ಪ : ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಯಡಿಯೂರಪ್ಪ ವಿರೋಧ ಪಕ್ಷದ ನಾಯಕ ಆದ ಮೇಲೆ ಮೊದಲಬಾರಿಗೆ ಈ ರೀತಿಯಾದಂಥ ಒಂದು ಸಂಪ್ರದಾಯ ಹಾಕುವುದಕ್ಕೆ ಹೊರಟಿದ್ದಾನೆ ಎಂದರೆ ಮಾನ್ಯ ಅಧ್ಯಕ್ಷರು ಏನು ಹೇಳುತ್ತಾರೆ ಅದನ್ನು ನಾನು ಕೇಳುತ್ತೇನೆ ಮತ್ತು ಕುಳಿತುಕೊಳ್ಳುತ್ತೇನೆ. ನನ್ನದು ಇಷ್ಟೆ. ನಾಳೆ ಈ ನಾಡಿನ ಅಥವಾ ಈ ದೇಶದ ಜನ ಇಡೀ ದೇಶದಲ್ಲಿ ಚರ್ಚೆಯಾಗುತ್ತಿರುವಂಥ ಈ ವಿಷಯಕ್ಕೆ ಮಹತ್ವ ಕೊಟ್ಟು ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ಚರ್ಚೆ ಮಾಡಿ ಇದಕ್ಕೆ ಪರಿಹಾರ ಹುಡುಕುವಂಥ ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ ಎನ್ನುವಂಥ ಆರೋಪಕ್ಕೆ ಗುರಿಯಾಗುವುದಕ್ಕೆ ನಾವು ಸಿದ್ಧರಿಲ್ಲ. ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಈ ಭಾಗದಲ್ಲಿ ನಾವು ನಿಮ್ಮ ಆಡಳಿತ ಪಕ್ಷಕ್ಕಿಂತ ಹೆಚ್ಚು ಜನ ಸದಸ್ಯರು ಕುಳಿತಿರುವಾಗ ದಯಮಾಡಿ ತಾವು ಚರ್ಚೆಗೆ ಅವಕಾಶ ಕಲ್ಪಸಿ ಕೊಡಬೇಕು. ನೀವು ರೂಲ್‌ನ್ನು ತೆಗೆದು ನೋಡಿ. ಹಿಂದೆ ಈ ರೀತಿ ಚರ್ಚೆ ನಡೆದಿಲ್ಲವೇ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಇವತ್ತು ಲೋಕಸಭೆಯಲ್ಲಿ ಕರ್ನಾಟಕ ರಾಜ್ಯದ ವಿಚಾರ ಚರ್ಚೆಯಾಗುತ್ತಿದೆ. ಲೋಕಸಭೆಯಲ್ಲಿ ಇಡೀ ದೇಶದ ಆರ್ಥಿಕ ಪರಿಸ್ಥಿತಿಯನ್ನು ಬುಡಮೇಲು ಮಾಡಿರತಕ್ಕಂಥ ವಿಷಯ ಪ್ರಸ್ತಾಪ ಆಗಿರುವಾಗ, ಈ ವಿಷಯದ ಬಗ್ಗೆ ಇಲ್ಲಿ ಚರ್ಚೆಯಾಗಬೇಕು. ಸರ್ಕಾರ ಅದರ ಬಗ್ಗೆ ಹೇಳಬೇಕು. ಅದು ಬಿಟ್ಟು ಸರ್ಕಾರದವರು ಮೊದಲು ಪ್ರಶ್ನೋತ್ತರ ಆಗಲಿ ಎಂದರೆ ನಮ್ಮದೇನೂ ಅಭ್ಯಂತರ ಇಲ್ಲ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮೊನ್ನೆ ಒಂದು ಘಟನೆ ನಡೆಯಿತು. ಹದಿನೈದನೇ ತಾರೀಖು ಗಂಟಲಿನ ಸಣ್ಣ ಆಪರೇಷನ್‌ಗೆ ನಾನು ಮನೆಯಿಂದ ಹೊರಡಬೇಕಿತ್ತು. ಆಗ ನಿಮ್ಮ ಉನ್ನತ ಪೊಲೀಸ್ ಅಧಿಕಾರಿ ಭಾವಾ ಅವರು ಒಬ್ಬ ಪ್ರೆಸ್ ರಿಪೋರ್ಟರ್ ಜತೆಗೆ ನಮ್ಮ ಮನೆಗೆ ಬರುತ್ತಾರೆ...

ಶ್ರೀ ಧರ್ಮಸಿಂಗ್ : ಚರ್ಚೆ ಪ್ರಾರಂಭ ಮಾಡುವಾಗ ಅದನ್ನು ಹೇಳಬೇಕು. ತಾವು ಯಾರದ್ದಾದರೂ ಹೆಸರು ಹೇಳಬೇಕಾದರೆ ಚರ್ಚೆ ಪ್ರಾರಂಭ ಮಾಡಿದಾಗ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ ನಾನು ಹೇಳುವಂಥಾದ್ದು ಯಾರ್ಯಾರೋ ಒತ್ತಾಯ ಮಾಡಿ ನಮ್ಮ ಹೆಸರು ಹೇಳಬಹುದು ಎಂದರೆ, ಆ ಮನುಷ್ಯನಿಗೆ ಮೊದಲಿನಿಂದಲೂ ಈ ಕೇಸ್‌ನಲ್ಲಿ ಇನ್ವಾಲ್ವ್‌ಮೆಂಟ್ ಇದೆ ಎಂದು ಗೊತ್ತಾದ ಮೇಲಾದರೂ ಕೂಡ ಸ್ಟಾಂಪಿಟ್‌ನಿಂದ ಅದನ್ನು ಎನ್‌ಕ್ವೈರಿ ಮಾಡಿದ್ದೀರಾ? ಸಿ.ಬಿ.ಐ. ನವರು ತಮ್ಮ ಕೈಗೆ ತೆಗೆದುಕೊಂಡರಾ? ಅಂದರೆ ನೀವು ಎಲ್ಲವನ್ನೂ ಮುಚ್ಚಿಹಾಕುವಂಥ ಪ್ರಯತ್ನ ಮಾಡಿಕೊಂಡು ಪೊಲೀಸ್ ಅಧಿಕಾರಿಗಳಿಗೆ ರಕ್ಷಣೆ ಮಾಡುವುದಕ್ಕೆ ಹೊರಟಂಥವರು ನಾಳೆ ದಿವಸ ಎಲ್ಲಿಗೆ ತೆಗೆದುಕೊಂಡು ಹೋಗಿ ಇದನ್ನು ಮುಟ್ಟಿಸುತ್ತೀರಿ? ಏತಕ್ಕೆ ಅವರು ನನ್ನ ಮನೆಗೆ ಬಂದರು? ಸ್ಟಾಂಪಿಟ್ ಪೊಲೀಸ್ ಆಫೀಸರ್ ನಮ್ಮ ಮನೆಗೆ ಬರುವುದಕ್ಕೆ ಕಾರಣ ಏನು? ಇದು ಏನು ನಡೆಸಿದ್ದೀರಿ ಎಂದು ನಾನು ಕೇಳುತ್ತಿದ್ದೇನೆ...

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಸಾಕಷ್ಟು ಸಲ ಇಲ್ಲಿ ಪ್ರಶ್ನೋತ್ತರವನ್ನು ಬದಿಗೊತ್ತಿ ಚರ್ಚೆ ಮಾಡಿದ್ದೇವೆ. ತಾವು ದಯಮಾಡಿ ಒಂದು ಸಲ ಅವಕಾಶ ಕೊಡಿ. ಇದು ಬಹಳ ವಿಶೇಷವಾದ ಸಂದರ್ಭ ಇದೆ. ಹಿಂದೆ ಇಂತಹ ಹಲವಾರು ಘಟನೆಗಳು ನಡೆದಿರುವಂಥ ಸಂದರ್ಭದಲ್ಲಿ, ಇಂತಹ ನಿಲುವಳಿ ಸೂಚನೆ ಸಂದರ್ಭದಲ್ಲಿ ಪ್ರಶ್ನೋತ್ತರವನ್ನು ಮುಂದೂಡಿದ್ದೇವೆ....

ಅಧ್ಯಕ್ಷರು : ನನ್ನ ಮನವಿ ಎನೆಂದರೆ ನಾವು ನಿಯಮಾವಳಿಗಳ ಪ್ರಕಾರ ನಡೆದುಕೊಳ್ಳೋಣ. ಪ್ರಶ್ನೋತ್ತರ ಕಾಲ ಏನಿದೆ ಅದು ಮೊದಲು ಆಗಬೇಕು. ಇಲ್ಲದಿದ್ದರೆ ಈ ರೀತಿ ಸಭೆಯನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಿಯಮಾವಳಿ ಪ್ರಕಾರ ತಾವು ನಡೆದುಕೊಳ್ಳಿ, ಆದರೆ ಈ ರೀತಿಯಾದಂಥ ವಿಶೇಷ ಸಂದರ್ಭ ಇರುವುದರಿಂದ ಹಿಂದೆ ಈ ಸದನದಲ್ಲಿ ಸಾಕಷ್ಟು

ಸಂಪ್ರದಾಯಗಳು ಇವೆ. ಪ್ರಶ್ನೋತ್ತರವನ್ನು ಬದಿಗೊತ್ತಿ ವಿಶೇಷವಾದಂಥ ಸಾರ್ವಜನಿಕ ಮಹತ್ವದ ವಿಷಯವನ್ನು ಮೊಟ್ಟಮೊದಲು ಚರ್ಚೆಗೆ ತೆಗೆದುಕೊಂಡಂಥ ಸಾಕಷ್ಟು ಉದಾಹರಣೆಗಳು ಈ ಸದನದಲ್ಲಿ ನಡೆದಿವೆ. ಇದು ಇಲ್ಲೂ ನಡೆದಿದೆ ಮತ್ತು ಪಾರ್ಲಿಮೆಂಟ್‌ನಲ್ಲಿ ಕೂಡ ನಡೆದಿದೆ. ಹೀಗಾಗಿ ನಾವು ಸಂಪ್ರದಾಯವನ್ನು ಬಿಟ್ಟು ಹೊಸದಾದ ಸಂಪ್ರದಾಯವನ್ನೇನೂ ಹುಟ್ಟು ಹಾಕುತ್ತಿಲ್ಲ. ದಯಮಾಡಿ ಇದು ಬಹಳ ಮಹತ್ವದ ವಿಷಯ ಇದೆ. ಅದಕ್ಕಾಗಿ ನಾನು ಸನ್ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ಮಾನ್ಯ ಮುಖ್ಯಮಂತ್ರಿಗಳನ್ನೂ ಕೂಡ ನಾನು ಒತ್ತಾಯ ಮಾಡುತ್ತೇನೆ. ತಾವೇ ಮುಂದೆ ಬಂದು ನಾವು ಚರ್ಚೆಗೆ ತಯಾರಿದ್ದೇವೆ, ಇವತ್ತಿನ ದಿವಸ ಪ್ರಶ್ನೋತ್ತರವನ್ನು ಮುಂದಕ್ಕೆ ಹಾಕುತ್ತೇವೆ ಎಂದು ಅವರು ಹೇಳಬಹುದಾಗಿತ್ತು.

(ಗೊಂದಲ)

ಅಧ್ಯಕ್ಷರು : ಈಗ ಒಂದೇನು ಎಂದರೆ, ಯಾರನ್ನು ನಾನು ಕರೆಯುತ್ತೇನೆ, ಅದು ಮಾತ್ರ ರೆಕಾರ್ಡಿಗೆ ಹೋಗಬೇಕು. ಉಳಿದದ್ದು ಯಾವುದೂ ರೆಕಾರ್ಡಿಗೆ ಹೋಗಬಾರದು. ನಾನು ಅವಕಾಶ ಕೊಟ್ಟವರು ಮಾತ್ರ ಮಾತನಾಡಬೇಕು. ಈ ರೀತಿಯಾದರೆ ನಾನು ಸದನವನ್ನು ನಡೆಸುವುದಕ್ಕೆ ಆಗುವುದಿಲ್ಲ. ಪ್ರಶ್ನೋತ್ತರ ವೇಳೆಯಾದ ಮೇಲೆ ಇದನ್ನು ತೆಗೆದುಕೊಳ್ಳುತ್ತೇನೆ. ಹೀಗಾದರೆ ಸಭೆ ನಡೆಸುವುದು ಹೇಗೆ?

ಮಾನ್ಯ ಸದಸ್ಯರು :- x x x

+ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ಸಚಿವರು) : ಒಂದು ನಿಮಿಷ, ಮಾನ್ಯ ಅಧ್ಯಕ್ಷರೇ, ನಾನು ಈಗ ಮಾತನಾಡತಕ್ಕದ್ದು ಇಷ್ಟೆ. ಈಗ ಅವರು ಒಂದು ನಿಲುವಳಿ ಸೂಚನೆ ರೂಪದಲ್ಲಿ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ಈ ವಿಚಾರದಲ್ಲಿ ಮುಕ್ತ ಮನಸ್ಸಿನಿಂದ ಚರ್ಚೆಯಾಗಲಿ ಎನ್ನತಕ್ಕದ್ದನ್ನು ಹೇಳಿದ್ದಾರೆ. ಚರ್ಚೆ ಆಗುವುದಾದರೆ ಯಾವ ರೂಪದಲ್ಲಿ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಅದು ತಮ್ಮ ವಿವೇಚನೆಗೆ ಬಿಟ್ಟಿರತಕ್ಕದ್ದು ಎಂದು ಹೇಳಿದ್ದಾರೆ. ಇಷ್ಟೆಲ್ಲ ಆದಾಗ್ಯೂ ಕೂಡ ಪ್ರಶ್ನೋತ್ತರವನ್ನು ಬದಿಗಿಟ್ಟು ಇದನ್ನು ತೆಗೆದುಕೊಳ್ಳಿ, ಇದು ಬಹಳ ಮಹತ್ವದ ವಿಚಾರ ಎಂದು ತಾವು ಪ್ರಸ್ತಾಪ ಮಾಡಿದ್ದೀರಿ. ಇದರ ಬಗ್ಗೆ ಇದೇ ಸದನದಲ್ಲಿ ಆಗಿರತಕ್ಕಂಥ ಉದಾಹರಣೆಗಳು ಇರಬಹುದು. ಅಥವಾ ಪಾರ್ಲಿಮೆಂಟ್‌ನಲ್ಲಿ ಆದಂಥ ಉದಾಹರಣೆಗಳು ಇರಬಹುದು. ಶ್ರೀ ಜಯಪ್ರಕಾಶ್ ನಾರಾಯಣ ಅವರಂಥವರ ಮೇಲೆ ಹಲ್ಲೆಯಾದಂಥ ಸಂದರ್ಭದಲ್ಲಿ ಕೂಡ ಆ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಅಂದಾಗ ಅದು ಆಗಲಿಲ್ಲ. ಇಲ್ಲಿ ಏನಾಗಿದೆ ಎಂದರೆ ಪ್ರಶ್ನೋತ್ತರ ವೇಳೆಯನ್ನು ಬದಿಗಿಟ್ಟು ತೆಗೆದುಕೊಳ್ಳಬೇಕಾದರೆ ಅದಕ್ಕೆ ಇಡೀ ಸದನ ಒಪ್ಪಿಕೊಳ್ಳಬೇಕಾಗುತ್ತದೆ. ಇಲ್ಲಿ ನಿಯಮಾವಳಿಗಳ ಪ್ರಕಾರ ಸದನವನ್ನು ನಡೆಸಬೇಕು ಎನ್ನತಕ್ಕಂಥ ಪ್ರಶ್ನೆ ಬಂದಾಗ ತಾವು ಹೇಳಿದ ಮಾತನ್ನು ಒಪ್ಪುತ್ತೇನೆ. ಇಡೀ ಸದನ ಪ್ರಶ್ನೋತ್ತರ ವೇಳೆಯನ್ನು ಪಕ್ಕದಲ್ಲಿಟ್ಟು ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ಒಪ್ಪಿಕೊಳ್ಳುವುದಾದರೆ ಅದು, 'Unanimously' ಎನ್ನತಕ್ಕಂಥ ಮಾತನ್ನು ಹೇಳುತ್ತಾರೆ. ಆದರೆ ಇಲ್ಲಿ 'Unanimously' ಇಲ್ಲ. ದಯಮಾಡಿ ಪ್ರಶ್ನೋತ್ತರ ಆದ ಮೇಲೆ ಈ ವಿಚಾರವನ್ನು ತೆಗೆದುಕೊಳ್ಳಬೇಕು. ಸನ್ಮಾನ್ಯ ಸಭಾಧ್ಯಕ್ಷರೇ, ಚರ್ಚೆಗೆ ನಾವು ಹಿಂದೆ ಸರಿಯುವುದಿಲ್ಲ. ಚರ್ಚೆ

---

xxx ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ದಾಖಲು ಮಾಡಿರುವುದಿಲ್ಲ

ಮಾಡುವುದಕ್ಕೆ ನಾವು ತಯಾರಾಗಿದ್ದೇವೆ. ಆದರೆ ಚರ್ಚೆಗೆ ತೆಗೆದುಕೊಳ್ಳ ಬೇಕಾಗಿದ್ದರೆ ಇದರೊಳಗೆ – "The Question Hour may be dispensed if the House agrees unanimously for devoting more time to the other business" ಎನ್ನತಕ್ಕಂಥಾದ್ದು ಇದೆ. ಈ ಕಾರಣಕ್ಕಾಗಿಯೇ ಮುಖ್ಯವಾಗಿ ಇಲ್ಲಿರತಕ್ಕಂಥ ಇಡೀ ಸದನ ಸಾರ್ವತ್ರಿಕವಾಗಿ ಅದನ್ನು ಒಪ್ಪಿಕೊಳ್ಳುವ. ಹಾಗಿದ್ದರೆ ಆಗ ತಾವು ತೆಗೆದುಕೊಳ್ಳತಕ್ಕಂಥ ನಿಲುವನ್ನು ನಾವು ಒಪ್ಪಿಕೊಳ್ಳುತ್ತೇವೆ. ಇಲ್ಲಿ ಒಂದು ಗಂಟೆ ಪ್ರಶ್ನೋತ್ತರದಲ್ಲಿ ಮುಖ್ಯವಾಗಿ ಇರತಕ್ಕಂಥ ವಿಷಯಗಳಿವೆ. ಅನೇಕ ಉದಾಹರಣೆಗಳನ್ನು ನಾನು ಕೊಡಬಲ್ಲೆ. ದಯಮಾಡಿ ಮಾನ್ಯ ಸಭಾಧ್ಯಕ್ಷರೇ, ಇದು ತಮ್ಮ ಸಹಕಾರಕ್ಕೆ ಬರತಕ್ಕದ್ದು– "On 7th of April 1975, immediately after the House met, member Jyothirmaya Basu, Jnaneshwara Mishra, Madhulimey, who had tabled notices under Rule 388 for suspension of Rule 32 and several other members of the opposition demanded the Question Hour is suspended in order to discuss a recent incident about alledged attack on Jayaprakash Narayan in Calcutta. After some discussion, Jyothirmaya Basu, Jnaneshwara Mishra and Madhulimey moved motion. Following the motion moved by Basu was negativated after division. ಈ ತರಹದಲ್ಲಿ ಇರುವುದರಿಂದ ನಾವು ನಿಯಮಾವಳಿಗಳ ಪ್ರಕಾರ ಸದನವನ್ನು ನಡೆಸಬೇಕಾಗುತ್ತದೆ. ಇಲ್ಲಿ ಇಡೀ ಸದನ ಒಪ್ಪಿಗೆ ಕೊಡುವುದಾಗಿದ್ದರೆ ಆಗ ಈ ಪ್ರಶ್ನೋತ್ತರ ವೇಳೆಯನ್ನು ಬದಿಗಿಟ್ಟು ಈ ಕೆಲಸವನ್ನು ಮಾಡಬಹುದು. ಇಲ್ಲಿ ಆಕಸ್ಮಾತ್ ಅದು ಆಗಿಲ್ಲವೆಂದರೂ ಕೂಡ ತಾವು ಈಗ ಒಂದು ರೂಲಿಂಗ್‌ನ್ನು ಕೊಟ್ಟಿದ್ದೀರಿ. ಈಗ ಎರಡನೇ ಪ್ರಶ್ನೆ ಬರುತ್ತದೆ. ತಾವು ಈಗಾಗಲೇ ಒಂದು ಸಲ ರೂಲಿಂಗ್ ಕೊಟ್ಟ ಮೇಲೆ ಅದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗಿರತಕ್ಕಂಥಾದ್ದು ಇದೆ. ತಾವು ಅದನ್ನು ಒಪ್ಪಿಕೊಂಡಿದ್ದೀರಿ. ಆದರೂ ಕೂಡ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಸಿಂಧ್ಯಾರವರ ಮೂಲಕ ಹೇಳಿ ಕಳುಹಿಸಿದ್ದರು ಏನೆಂದರೆ ನೀವು ಸಹಕಾರ ಕೊಡುತ್ತೇವೆ ಎನ್ನುವುದಾಗಿದ್ದರೆ ಒಪ್ಪಬಹುದು ಎಂದಾಗ, ವಿರೋಧ ಪಕ್ಷದ ನಾಯಕರು ನಿಂತು ವಿಚಾರವನ್ನು ಪ್ರಸ್ತಾಪ ಮಾಡಬೇಕಾದರೆ ಇಪ್ಪತ್ತು ಮಂದಿ ಎದ್ದು ನಿಂತುಕೊಂಡು ಮಾತನಾಡತಕ್ಕಂಥಾದ್ದು ಇದು ಯಾವ ನಡವಳಿಕೆ? ಮಾನ್ಯ ಮುಖ್ಯಮಂತ್ರಿಗಳು ಹೇಳಿ ಕಳುಹಿಸಿದ್ದಾರೆ, ಏನೆಂದರೆ ಅವರು ಅಷ್ಟು ಒಪ್ಪುವುದಾದರೆ ಪ್ರಶ್ನೋತ್ತರ ವೇಳೆಯನ್ನು ಬಿಟ್ಟು ಇಲ್ಲಿ ಚರ್ಚೆ ಮಾಡುವುದಕ್ಕೆ ನಾವು ತಯಾರಿದ್ದೇವೆ ಎಂದು ನಾವು ಇಷ್ಟು ನಿಮಗೆ ಸಹಕಾರ ಕೊಡಬೇಕು ಎಂದು ನಿಂತುಕೊಂಡರೆ ನೀವು 20–30 ಮಂದಿ ನಿಂತುಕೊಂಡು ಮಾತನಾಡಿದರೆ ಹೇಗೆ? ಮಾನ್ಯ ವಿಶ್ವೇಶ್ವರ ಹೆಗಡೆಯವರೇ, ನಿಮ್ಮ ನಾಯಕರೇ ನಿಂತು ಮಾತನಾಡುವಾಗ ಬಹಳ ಹೆಚ್ಚೆಚ್ಚು ಸಾರಿ ನಡುವೆ ನೀವು ಏಳುತ್ತಿದ್ದೀರಿ. ನೀವು ಅಲ್ಲಿಗೇನಾದರೂ ಬರಬೇಕು ಎಂಬ ಉದ್ದೇಶ ಇದೆಯಾ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಜೈಲಿಗೆ ಕಳಿಸುತ್ತೇವೆ ಎಂದು ಹೇಳಿ ಅಪವಿತ್ರ ಮೈತ್ರಿ ಮಾಡಿಕೊಂಡು ಹೊಂದಾಣಿಕೆ ಮಾಡಿಕೊಂಡು ಬಂದಿದ್ದೀರಿ. ಅವರವರ ಹೆಸರುಗಳನ್ನು ಹೇಳಿ ಕಳಿಸಬೇಕೆಂದು ನಾವು ತಯಾರಾಗಿದ್ದೇವೆ.

(ಗೊಂದಲ)

ಮಾನ್ಯ ಸದಸ್ಯರು : ನಮಗೆ ನೀವು ಹೇಳಬೇಕಾಗಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಅವರು ಮಾತನಾಡಿ ಮುಗಿದ ಮೇಲೆ ನೀವು ಹೇಳಿ. ಯಾರಿಗೂ ಹೇಳಬೇಕಾದ ಅಧಿಕಾರ ನಮಗೆಲ್ಲರಿಗೂ ಇದೆ. ಎಲ್ಲರೂ ಕೂಡ ನಿಯಮಾವಳಿಗಳ ಪ್ರಕಾರ ನಡೆದುಕೊಳ್ಳಬೇಕಾಗುತ್ತದೆ. ನೀವು ನಿಯಮಾವಳಿಗಳನ್ನು ಮೀರಿ ನಿಂತವರು ಅಲ್ಲ. ಇಲ್ಲಿ ಸಂಪ್ರದಾಯಗಳು ಇವೆ. ವಿರೋಧ ಪಕ್ಷದ ನಾಯಕರು ಎದ್ದು ನಿಂತು ಹೇಳಬೇಕಾದರೆ ಹಿಂದೆ ಕುಳಿತುಕೊಂಡವರು ಎದ್ದು ನಿಂತು ಮಾತನಾಡುವುದನ್ನು ಮಾಡಿದರೆ ಯಾವ ರೀತಿ ನಡವಳಿಗಳನ್ನು ಮಾಡಬೇಕಾಗುತ್ತದೆ?

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ಈ ರೀತಿ ಮಾತನಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈ ರೀತಿ ರಾಜಕಾರಣವನ್ನು ಮಾಡಿ ನಿಮ್ಮ ಬೇಳೆಯನ್ನು ಬೇಯಿಸಿಕೊಳ್ಳುವಂಥಾದ್ದು ಬೇಡ. ಸದನದಲ್ಲಿ ಹೇಗೆ ನಡೆದುಕೊಳ್ಳಬೇಕು ಎನ್ನುವಂಥಾದ್ದು ನಮಗೆ ಕೂಡ ಗೊತ್ತಿದೆ. ನಾನೂ ಕೂಡ ಮೂರನೇ ಬಾರಿ ಆಯ್ಕೆಯಾಗಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ....

ಅಧ್ಯಕ್ಷರು : ದಯಮಾಡಿ, ಸಹಕಾರ ಮಾಡಿ, ಪ್ರಶ್ನೋತ್ತರಗಳು ನಡೆಯಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅವರ ಅನುಭವ, ಅವರ ಪ್ರತಿಭೆ, ಅವರ ಬುದ್ಧಿವಂತಿಕೆಯ ಎದುರುಗಡೆಯಲ್ಲಿ ನಾವು ಸಾಕಷ್ಟು ಕಲಿಯುವಂಥಾದ್ದು ಇದೆ. ಅದರ ಬಗ್ಗೆ ನನ್ನ ಭಿನ್ನಾಭಿಪ್ರಾಯ ಇಲ್ಲ. ಆದರೆ ನಮ್ಮ ನಾಯಕರು ಎದ್ದು ನಿಂತಾಗ ನಾವು ಹೇಗೆ ಇರಬೇಕು ಎನ್ನುವಂಥಾದ್ದನ್ನು ಮಾನ್ಯ ಎಂ.ಪಿ. ಪ್ರಕಾಶ್ ಅವರಿಂದ ನಾವು ಕಲಿಯಬೇಕಾಗಿಲ್ಲ. ನಮ್ಮ ನಾಯಕರು, ನಮಗೆಲ್ಲರಿಗೂ ಮಾರ್ಗದರ್ಶನ ನೀಡಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ : ಈ ರೀತಿ ರಾಜಕಾರಣ ಮಾಡುವುದಕ್ಕೆ ಈ ಸದನದಲ್ಲಿ ಅವಕಾಶ ಕೊಡಬಾರದು.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಯಾವ ಒಬ್ಬ ಸದಸ್ಯರೂ ಮತ್ತೊಬ್ಬ ಸದಸ್ಯರಿಂದ ಕಲಿಯಬೇಕಾದದ್ದು ಏನೂ ಇಲ್ಲ. ಅವರು ಸರ್ವಜ್ಞರಾಗಿರುತ್ತಾರೆಂಬುದು ನನಗೆ ಗೊತ್ತಿದೆ. ಆದರೆ, ನಿಯಮಾವಳಿಗಳಿಂದ ಕಲಿಯಬೇಕಾದದ್ದು ಇದೆ. ನಿಯಮಾವಳಿಗಳು ಯಾವ ರೀತಿ ಇವೆ, ಅದರ ಪ್ರಕಾರ ಕಲಿಯಲಿ ಎಂದು ಹೇಳಿದ್ದೇನೆಯೇ ವಿನಹ ನನ್ನಿಂದ ಪಾಠ ಕಲಿಯಲಿ ಎಂದು ನಾನು ಹೇಳಿಲ್ಲ. ಸನ್ಮಾನ್ಯ ಅಧ್ಯಕ್ಷರೇ, ತಾವು ತೀರ್ಮಾಣ ಕೊಟ್ಟ ನಂತರ ಕೂಡ, ಮಾನ್ಯ ಮುಖ್ಯ ಮಂತ್ರಿಗಳು ಸಿದ್ಧಾರವರ ಮೂಲಕ ಹೇಳಿಕಳುಹಿಸಿದರು. ನಾವು ಪ್ರಶ್ನೋತ್ತರವನ್ನು ಬದಿಗಿಟ್ಟು ಕೂಡ ನಾವು ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆಂದು ಎಂದು. ಆದರೆ, ತಾವು ಈ ಸಂದರ್ಭದಲ್ಲಿ ಅದನ್ನು ಪರಿಗಣಿಸಬಹುದು, ನಾವು ತಯಾರಿದ್ದೇವೆ. ನಾನು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಆ ಕಡೆಯವರೆಲ್ಲರಲ್ಲೂ ಪ್ರಾರ್ಥನೆ ಮಾಡಿಕೊಳ್ಳುವುದು ಇಷ್ಟೆ. ಈ ಸಭೆ

ಒಂದು ಪೂರ್ವಾಗ್ರಹ ಪೀಡಿತ ದೃಷ್ಟಿಕೋನದಿಂದ ನಡೆಯತಕ್ಕಂಥಾದ್ದು ಆಗಬಾರದು. ಸಂಪೂರ್ಣವಾದ ರೀತಿಯಲ್ಲಿ ಚರ್ಚೆ ನಡೆಯಲಿ, ಅದಕ್ಕೆ ಉತ್ತರ ಕೊಡುವುದಕ್ಕೆ ಸರ್ಕಾರ ತಯಾರಿದೆ. ಮಾನ್ಯ ಮುಖ್ಯಮಂತ್ರಿಗಳೂ ಹೇಳಿದ್ದಾರೆ, ಇಡೀ ಸದನ ಒಪ್ಪುವುದಾದರೆ ನಾವು ಅದಕ್ಕೆ ತಯಾರಿದ್ದೇವೆ. ತಾವೇನಾದರೂ ಆ ವಿಚಾರದಲ್ಲಿ ತೀರ್ಮಾನವನ್ನು ತೆಗೆದುಕೊಳ್ಳಿ. ಏಕೆಂದರೆ, ಈಗಾಗಲೇ ತಮ್ಮ ತೀರ್ಮಾನವನ್ನು ಹೇಳಿದ್ದೀರಿ. ನಾವು ಇಷ್ಟು ದೂರ ಮುಂದೆ ನಡೆದಾಗ, ವಿರೋಧ ಪಕ್ಷದ ನಾಯಕರೂ ಕೂಡ ಎರಡು ಹೆಜ್ಜೆ ಮುಂದೆ ಬರಲಿ. ತಾವು ಹೇಳಿ. ನೀವು ಹಿರಿಯರು ನಮ್ಮ ಸಹಕಾರಕ್ಕೆ ಬರಬೇಕು. ತಾವು ಕೂಡ ಸಿಗ್ನೇಟರೀಸ್ ಇದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈಗ ನಾವೇನು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ, ಅದರ ಮಹತ್ವದ ಬಗ್ಗೆ ಮತ್ತು ಅದರ ಜರೂರು ಎಷ್ಟಿದೆ ಎಂಬುದನ್ನು ತಾವು ಅರಿತುಕೊಳ್ಳಬೇಕು. ಪ್ರಶ್ನೋತ್ತರವನ್ನು ಬದಿಗೊತ್ತಿ, ಇಂತಹ ಅನೇಕ ವಿಚಾರಗಳನ್ನು ಇದೇ ಸದನದಲ್ಲಿ ಚರ್ಚೆ ಮಾಡಿರತಕ್ಕಂಥ ನಿದರ್ಶನಗಳು ನೂರಾರು ಇವೆ. ಮಾನ್ಯ ಪ್ರಕಾಶ್‌ರವರು ಈಗ ಆ ಕಡೆ ಇರುವುದರಿಂದ, ಬಹುಶಃ ಅವರ ವಾದವನ್ನು ನಾನು ಒಪ್ಪುತ್ತೇನೆ. ಏಕೆಂದರೆ, ಅವರು ಆ ಕಡೆ ಇರುವುದರಿಂದ ಈ ವಾದ ಮಾಡಬೇಕು. ಅದರ ಬಗ್ಗೆ ನಮ್ಮ ತಕರಾರು ಇಲ್ಲ. ಆ ವಾದವನ್ನು ಅವರು ಸಮರ್ಥವಾಗಿ ಮಾಡಬೇಕು. ಸಮರ್ಥವಾಗಿ ಮಾಡದೇ ಇದ್ದರೆ, ಅಪನಂಬಿಕೆ ಬರುತ್ತದೆ. ಅವರೂ ಸಮರ್ಥವಾಗಿ ವಾದವನ್ನು ಮಾಡುತ್ತಿದ್ದಾರೆ. ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ, ನಾನು ತಮ್ಮಲ್ಲಿ ಒಂದು ಮಾತು ಹೇಳುತ್ತೇನೆ. ಇದು ಮಹತ್ವ ಪೂರ್ಣವಾದಂಥ ವಿಚಾರ; ನ್ಯಾಯಾಲಯದಲ್ಲಿ ಬಂದಿದೆ, ಜನಜನಿತವಾಗಿದೆ. ಹಾದಿ ಬೀದಿಯಲ್ಲಿ ಆಗಿದೆ. ಇದು ದೇಶ ವಿದೇಶಗಳಿಗೆ ಹೋಗಿರತಕ್ಕಂಥ ಪರಿಣಾಮಕಾರಿಯಾದಂಥ ಸುದ್ದಿ, ಸಂಗ್ರಾಮ್ ವಿಚಾರ. ಇದನ್ನು ಚರ್ಚೆ ಮಾಡುವುದಕ್ಕೆ, ಇವತ್ತು ನಾವು ಪ್ರಶ್ನೋತ್ತರವನ್ನು ನಡೆಸಿ, ನಂತರ ಚರ್ಚೆ ಮಾಡಬೇಕೆಂದು ಹೇಳಿದರೆ, ಈ ವಿಚಾರಕ್ಕೆ ಮಹತ್ವ ಹೋಗುತ್ತದೆ. ಆದ್ದರಿಂದ, ಮಾನ್ಯ ಅಧ್ಯಕ್ಷರೇ, ಪ್ರಶ್ನೋತ್ತರವನ್ನು ಬದಿಗೊತ್ತಿ ಈ ವಿಚಾರವನ್ನು ನೇರವಾಗಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕಳಕಳಿಯ ಮನವಿ ಮಾಡುತ್ತೇನೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಈಗ ಅಧ್ಯಕ್ಷರೂ ಕೂಡ ವಿನಂತಿ ಮಾಡಿದ್ದಾರೆ. ಪ್ರಶ್ನೋತ್ತರ ಮೊದಲು ತೆಗೆದುಕೊಳ್ಳಬೇಕು. ತದನಂತರ ಈ ಚರ್ಚೆಗೆ ಅವಕಾಶ ಇದೆ. ಚರ್ಚೆಯಲ್ಲಿ ವಿರೋಧ ಪಕ್ಷದ ನಾಯಕರು ಮತ್ತು ಎಲ್ಲಾ ಸದಸ್ಯರಿಗೆ ಈ ವಿಷಯದ ಮೇಲೆ ಬೆಳಕು ಚೆಲ್ಲತಕ್ಕ ಹಕ್ಕು ಇದೆ. ಸರ್ಕಾರವೂ ಕೂಡ ಅದಕ್ಕೆ ರೆಡಿ ಇದೆ. ಮಾನ್ಯ ವಾಟಾಳ್ ನಾಗರಾಜ್‌ರವರು ನಮ್ಮ ಕಡೆ ಬರುತ್ತಾರೆಂದು ತಿಳಿದುಕೊಂಡಿದ್ದೆ, ಅದು ಆಗಲಿಲ್ಲ. ಎಷ್ಟೋ ಸಲ ಪ್ರಶ್ನೋತ್ತರವನ್ನೂ ಬದಿಗೊತ್ತಿ ಚರ್ಚೆಗೆ ಅವಕಾಶ ಕೊಟ್ಟಿದೆ. ಇವತ್ತು ಮೊಂಡು ವಾದ ಏನು ವಿರೋಧ ಪಕ್ಷಗಳಿಂದ ಬರುತ್ತಾ ಇದೆ, ನಾವು ಮೊದಲಿನಿಂದಲೂ ಹೇಳಿದ್ದೇವೆ. ಈ ಸಮ್ಮಿಶ್ರ ಸರ್ಕಾರ ಏನಿದೆ, ರಾಜ್ಯದಲ್ಲಿ ಬೇಕಾದ ಸಮಸ್ಯೆಗಳು ಇರಲಿ, ಏನಾದರೂ politicalises ಮಾತಕ್ಕಂಥಾದ್ದು ಇರಲಿ, ಪ್ರಾಮಾಣಿಕವಾಗಿದ್ದು ಇರಲಿ, ನಾವು ಯಾವಾಗಲೂ ಹೇಳಿದ್ದೇವೆ. ಪ್ರತಿಯೊಂದು ವಿಷಯದ ಬಗ್ಗೆಯೂ ಮುಕ್ತವಾದ ಚರ್ಚೆಗೆ ಅವಕಾಶ ಇದೆ. ಅದಕ್ಕೆ ಸರ್ಕಾರ ಉತ್ತರ ಕೊಡುವುದಕ್ಕೆ ತಯಾರಿದೆ. ಈಗಾಗಲೇ ನಾವು

ಹೇಳಿದ್ದೇವೆ. ತಾವೂ ಕೂಡ ಹೇಳಿದ್ದೀರಿ. ಪ್ರಶ್ನೋತ್ತರಗಳನ್ನು ಮೊದಲು ತೆಗೆದುಕೊಂಡು ನಂತರ ಈ ಚರ್ಚೆಗೆ ಅವಕಾಶ ಕೊಡಲಾಗುವುದು ಎಂದು. ಆದರೂ ಕೂಡ, ಇದು ಏಕೋ ಆಗಲೇಬೇಕೆಂದು ಇದೆ. ನಾನು ಅಧ್ಯಕ್ಷರಿಗೆ ಮನವಿ ಮಾಡಿಕೊಳ್ಳುತ್ತೇನೆ. ತಾವು ಯಾವ ರೀತಿಯಾಗಿ, ಯಾವ ನಿಯಮದಡಿ ಚರ್ಚೆಗೆ ಅವಕಾಶ ಕೊಡಬೇಕೆಂಬುದನ್ನು ನಿರ್ಧಾರ ಮಾಡಿ. ಆದರ ಬಗ್ಗೆ ಸರ್ಕಾರ ಉತ್ತರ ಕೊಡುವುದಕ್ಕೆ ಸಿದ್ಧವಿದೆ.

3) ಅಧ್ಯಕ್ಷರ ತೀರ್ಪು

ಪ್ರಶ್ನೋತ್ತರಗಳ ನಂತರ ನಿಲುವಳಿ ಸೂಚನೆ ಬದಲಿಗೆ ನಿಯಮ 69ರ ಮೇಲೆ ಚರ್ಚೆಗೆ ಅವಕಾಶ ನೀಡಿಕೆ

ಅಧ್ಯಕ್ಷರು : ನಿಯಮಾವಳಿಗಳ ಪ್ರಕಾರ ಪ್ರಶ್ನೋತ್ತರವಾದ ಮೇಲೆ ನಿಲುವಳಿ ಸೂಚನೆಯನ್ನು ತೆಗೆದುಕೊಂಡು ನಿಮಗೆ ಅವಕಾಶ ಕೊಡುತ್ತೇನೆಂದು ನಾನು ಹೇಳಿದ್ದೆ. ಈಗ ಮಾನ್ಯ ಸಭಾ ನಾಯಕರು ನಾವು ಯಾವುದೇ ಚರ್ಚೆಗೆ ಒಪ್ಪಿದ್ದೇವೆಂದು ಹೇಳಿದ್ದಾರೆ. ಆ ಕಾರಣದಿಂದ ಈಗ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಂಡು ನಿಲುವಳಿ ಸೂಚನೆಯನ್ನು ತಳ್ಳಿ ಹಾಕಿ ನಿಯಮ 69ರ ಅಡಿಯಲ್ಲಿ ಪ್ರಶ್ನೋತ್ತರ ಆದ ಮೇಲೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

ಗೊಂದಲ

Mr. Speaker : Ruling has been given. ದಯಮಾಡಿ, ಎಲ್ಲರೂ ತಮ್ಮ ತಮ್ಮ ಆಸನಗಳಿಗೆ ಹೋಗಿ ಕುಳಿತುಕೊಳ್ಳಬೇಕು ಮತ್ತು ಸಹಕರಿಸಬೇಕು.

ಶ್ರೀ ಆರಗ ಜ್ಞಾನೇಂದ್ರ : ನಾವು ನಿಮ್ಮನ್ನು ಕನ್‌ವಿನ್ಸ್ ಮಾಡಬೇಕಲ್ಲಾ ಸಾರ್. ಈ ನಿಲುವಳಿ ಸೂಚನೆ ಬಗ್ಗೆ ಕನ್‌ವಿನ್ಸ್ ಮಾಡಬೇಕಾಗಿದೆ. ಸರ್ಕಾರವೂ ಒಪ್ಪಿದೆ, ವಿರೋಧ ಪಕ್ಷವೂ ಒಪ್ಪಿದೆ.

ಗೊಂದಲ

ಅಧ್ಯಕ್ಷರು : ಪ್ರಶ್ನೋತ್ತರ ವೇಳೆಯಾದ ಮೇಲೆ ಎಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ.

4) ಅಧ್ಯಕ್ಷರ ತೀರ್ಪನ್ನು ಪುನರ್ ಪರಿಶೀಲನೆ ಮಾಡಲು ಮನವಿ ನಿಲುವಳಿ ಸೂಚನೆ ಬದಲಿಗೆ ನಿಯಮ 69ರ ಮೇಲೆ ಚರ್ಚೆಗೆ ಅವಕಾಶ ನೀಡಿದ್ದರ ಬಗ್ಗೆ

ಶ್ರೀ ಆರಗ ಜ್ಞಾನೇಂದ್ರ : ಪ್ರಿಲಿಮಿನರಿ ಸಬ್‌ಮಿಷನ್ ಆದ ಮೇಲೆ ಯಾವ ರೂಲ್ಸ್ ಮೇಲೆ ಚರ್ಚೆ ಮಾಡಬೇಕೆಂದು ತಾವು ನಿರ್ಧಾರ ಮಾಡಬೇಕಾಗುತ್ತದೆ. ದಯವಿಟ್ಟು ಪುನರ್ ಪರಿಶೀಲನೆ ಮಾಡಿ, ಪ್ರಶ್ನೋತ್ತರವನ್ನು ಬದಿಗೊತ್ತಿ ಈ ವಿಷಯವನ್ನು ಮೊದಲು ತೆಗೆದುಕೊಳ್ಳಿ.

ಅಧ್ಯಕ್ಷರು : ಒಂದು ವಿಷಯವನ್ನು ತಾವು ದಯಮಾಡಿ ತಿಳಿದುಕೊಳ್ಳಿ. ಸಭೆ ಯುನಾನಿಮಸ್ ಆಗಿ ಏನಾದರೂ ಒಪ್ಪಿಕೊಂಡರೆ, ಪ್ರಶ್ನೋತ್ತರ ವೇಳೆಯನ್ನು ರದ್ದು ಮಾಡಿ, ಇದನ್ನು ತೆಗೆದುಕೊಳ್ಳಲು ನನ್ನದು ಅಭ್ಯಂತರ ಇಲ್ಲ. ಇಲ್ಲದೇ ಇದ್ದರೆ, ನಿಯಮಾವಳಿಯನ್ನು ಬಿಟ್ಟು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ದಯಮಾಡಿ ಎಲ್ಲರೂ ಸಹಕರಿಸಬೇಕು. ಈಗ ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಆ ಸ್ಥಾನದಲ್ಲಿ ತಾವು ಕುಳಿತಿದ್ದೀರಿ. ನಿಮ್ಮ ಬಗ್ಗೆ ನಮಗೆ ಪೂರ್ಣ ಗೌರವ ನಮಗೆ ಇದೆ. ನಿಮ್ಮ ಆದೇಶ ಅಂತಿಮ. ನಾನು ಇಷ್ಟೇ